

ಚಾಣಾಕ್ಷತನದ ಅರಿವು ನಮಗಾಗಲು ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ. ಅವರ ಚಾಣಾಕ್ಷತನದ ಅನುಭವ ಮೊದಲ ಗಂಟೆಯಲ್ಲೇ ಆಯಿತೆನ್ನಿ!

ನಮ್ಮ ವಿಶ್ವಾಸವನ್ನು ಗಳಿಸಿದ ಚೆಂಗ್, ಚೀನಾದ ಯುವಾನ್ ಕರೆನ್ಸಿಗೂ, ಅಮೆರಿಕದ ಡಾಲರಿಗೂ ಇರುವ ವಿನಿಮಯದ ರೇಟನ್ನು ವಿವರಿಸಿ, ದೇಶದಲ್ಲಿ ವ್ಯವಸ್ಥಿತವಾಗಿ ನಕಲಿ ಯುವಾನ್ ಚಲಾವಣೆ ನಡೆಯುತ್ತಿದ್ದು ನಾವು ಜಾಗರೂಕರಾಗಿರಬೇಕೆಂದು ಎಚ್ಚರಿಸಿದಳು. ಅಷ್ಟೇ ಅಲ್ಲ, ಹೋಟೆಲ್ ಅಥವಾ ಬ್ಯಾಂಕ್‌ಗಳಿಗಿಂತಲೂ ಅತ್ಯಂತ ಕಮ್ಮಿ ವಿನಿಮಯ ರೇಟಿನಲ್ಲಿ ಯುವಾನ್‌ಗಳನ್ನು ತಾನು ಕೊಡುತ್ತೇನೆಂದು ನಮ್ಮಲ್ಲಿ ವಿಶ್ವಾಸ ಹುಟ್ಟಿಸಿದಳು. ಅವಳನ್ನು ನಂಬಿದ ಅನೇಕ ಸಹಪ್ರವಾಸಿಗರು ಆಕೆಯ ಬಳಿಯೇ ಕರೆನ್ಸಿ ವಿನಿಮಯ ಮಾಡಿಕೊಂಡರು. ನನ್ನಲ್ಲಿ ಅನುಮಾನ ಹುಟ್ಟಿದರೂ ಇರಲಿ ಎಂದು ನಾನೂ ಸಹ ಕನಿಷ್ಠ ಮೊತ್ತದ ವಿನಿಮಯ ಮಾಡಿಕೊಂಡೆ.

ಹೋಟೆಲ್ ತಲುಪಿದಾಕ್ಷಣ ಕುತೂಹಲದಿಂದ ವಿಚಾರಿಸಿದೆ. ಅಲ್ಲಿ ವಿನಿಮಯ ರೇಟ್ ಇನ್ನೂ ಕಮ್ಮಿಯೆಂದು ತಿಳಿದಾಗ, ಚೀನೀಯರ ಚಾಣಾಕ್ಷತನದ ಬಗ್ಗೆ ಖಾತರಿಯಾಯಿತು. ನಾವೆಲ್ಲರೂ ಬಸ್ಸಿನಿಂದ ಇಳಿಯುವ ಮುಂಚೆ, ಸುಮಾರು ಹತ್ತು ಸಾವಿರ ಡಾಲರಷ್ಟನ್ನು ವಿನಿಮಯ ಮಾಡಿದ್ದ ಚೆಂಗ್, ಕನಿಷ್ಠ ಐದು ಸಾವಿರ ಯುವಾನ್‌ನಷ್ಟು ಲಾಭ ಮಾಡಿಕೊಂಡಿದ್ದಳು. ಲಾಬಿಯಲ್ಲಿ ಸಿಕ್ಕಾಗ ಅವಳನ್ನು ಕೇಳಿಯೇಬಿಟ್ಟೆ. ಲಾಭದ ಉಮೇದಿನಲ್ಲಿದ್ದ ಚೆಂಗ್ ಉತ್ತರವಿಲ್ಲದೆ ಪೆಚ್ಚಾದಳು.

## ಪುರಾತನ ಚಾರಿತ್ರಿಕ ಸ್ಥಳಗಳು

ರಾಜಧಾನಿ ಬೀಜಿಂಗ್ ಪುರಾತನ ಮತ್ತು ಆಧುನಿಕ ಚೀನಾದ ಪ್ರತೀಕ. ಪೂರ್ವದ ಪರಿಮಳವೂ ಪಶ್ಚಿಮದ ಶೈಲಿಯೂ ಹದವಾಗಿ ಬೆರೆತಿರುವ ಅದ್ಭುತವಾದ ಸಂಸ್ಕೃತಿ. ಇಲ್ಲಿ ನೋಡಲೇಬೇಕಾದ ಅನೇಕ ರೋಚಕ, ಕುತೂಹಲಕಾರಿ ಸ್ಥಳಗಳಿವೆ.

ಗ್ರೇಟ್ ವಾಲ್: ಸ್ವಾಭಾವಿಕವಾಗಿಯೇ ನಮ್ಮ ಪ್ರವಾಸ ಪುರಾತನ ಪ್ರಪಂಚದ ಅದ್ಭುತಗಳಲ್ಲೊಂದಾದ ಗ್ರೇಟ್ ವಾಲ್‌ನಿಂದಲೇ ಶುರುವಾಯಿತು. ಎಷ್ಟೋ ಕಿಲೋಮೀಟರ್ ದೂರದಿಂದ ನೋಡಿದ ತಕ್ಷಣವೇ 'ಅಗೋ, ಗ್ರೇಟ್ ವಾಲ್' ಎಂದು ಬಸ್ಸಿನಲ್ಲಿದ್ದವರೆಲ್ಲರೂ ಒಕ್ಕೊರಲಿನಿಂದ ಉದ್ಗಾರವೆತ್ತಿದ್ದು ಗ್ರೇಟ್ ವಾಲಿನ ಸೋಜಿಗಕ್ಕೊಂದು ಸಾಕ್ಷಿ.

ಕಡಿದಾದ ಬೆಟ್ಟಗುಡ್ಡಗಳು, ವಿಸ್ತಾರವಾದ ಬಯಲು ಪ್ರದೇಶಗಳ ಪ್ರಾಕೃತಿಕ ನೋಟಕ್ಕೆ ಹೊಂದಿಕೊಂಡಂತೆ ಮಹಾ ಗೋಡೆ ನಿರ್ಮಾಣಗೊಂಡಿದೆ. ಸುಮಾರು 5 ಅಡಿಗಳಷ್ಟು ಎತ್ತರ, 8–15 ಅಡಿ ಅಂತರದಲ್ಲಿ ಎರಡು ಗೋಡೆಗಳು; ಮಧ್ಯೆ ಮೆಟ್ಟಿಲುಗಳು. ಆದರೆ ಅವುಗಳ ಎತ್ತರ ಸರಿಸಮನಾಗಿಲ್ಲ.

ನಾವು ಅಲ್ಲಿಗೆ ತೆರಳಿದಾಗ ಮೋಡ ಕವಿದಿತ್ತು. ಚಳಿ ಅಷ್ಟೊಂದು ತೀಕ್ಷ್ಣವಾಗಿರಲಿಲ್ಲ. ಚಾರಣ ಮಾಡಲು ಹೇಳಿ ಮಾಡಿಸಿದಂತಹ ವಾತಾವರಣ. ವರ್ಷಗಳ ಬಯಕೆ ಸಾಕಾರವಾಗಿ ನಮ್ಮ ಮುಂದೆ ಭವ್ಯವಾಗಿ ಎದ್ದು ನಿಂತಿದ್ದ ಮಹಾ ಗೋಡೆಯನ್ನು ಉತ್ಸಾಹದಿಂದ ಹತ್ತಲಾರಂಭಿಸಿದೆವು. ಗೋಡೆಯ ಮಧ್ಯೆ ಅಲ್ಲಲ್ಲಿ ಕಾವಲು ಗೋಪುರಗಳು. ಅಪೂರ್ವವಾದ ವಾಸ್ತುಶಿಲ್ಪದ ಸೌಂದರ್ಯದಿಂದ ಇಡೀ ಸಂಕೀರ್ಣದ ದೃಶ್ಯ ರಮಣೀಯವಾಗಿತ್ತು.



ಬೀಜಿಂಗ್ ನಗರದ ಲ್ಯಾಂಡ್‌ಮಾರ್ಕ್ ಕಟ್ಟಡ